ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ 441 ಇ.ಎಂ.ಐ.ಎಸ್ 2018-19 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:೩/-03-2019

# ಸುತ್ತೋಲೆ

ವಿಷಯ: ಇಎಂಐಎಸ್ ತಂತ್ರಾಂಶದಲ್ಲಿ ಅಗತ್ಯ ಮಾಹಿತಿಗಳನ್ನು ದಾಖಲಿಸುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಬೋಧನಾ ಕಾರ್ಯಭಾರ ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು EMISನಲ್ಲಿ ಅಪ್‌ಲೋಡ್ ಮಾಡುವಂತೆ ಅನೇಕ ಬಾರಿ ಸೂಚಿಸಲಾಗಿದ್ದರೂ ಸಹ ಹಲವಾರು ಕಾಲೇಜುಗಳಿಂದ ಮಾಹಿತಿಗಳನ್ನು ಅಪ್‌ಲೋಡ್ ಮಾಡದಿರುವುದು ಹಾಗೂ ಅಪೂರ್ಣ ಮಾಹಿತಿಗಳನ್ನು ಅಪ್‌ಲೋಡ್ ಮಾಡಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಅಂಶಗಳ ಬಗ್ಗೆ ಗಮನಹರಿಸಿ ಮಾಹಿತಿಯನ್ನು ನಿಖರವಾಗಿ ದಿನಾಂಕ:05-04-2019ರ ಒಳಗಾಗಿ EMISನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಈಗಾಗಲೇ ಅಪ್‌ಲೋಡ್ ಮಾಡಲಾಗಿರುವ ಮಾಹಿತಿಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

- ಕಾಲೇಜಿನಲ್ಲಿ ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಕಡ್ಡಾಯವಾಗಿ ತಪ್ಪಿಲ್ಲದಂತೆ ನಮೂದಿಸುವುದು.
- ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರ ಜನ್ಮ ದಿನಾಂಕ, ನೇಮಕಾತಿ ಹೊಂದಿದ ದಿನಾಂಕ ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ (ಲೀನ್ ಹೊಂದಿದ) ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕವನ್ನು (dd-mm-yyyy) ತಪ್ಪಿಲ್ಲದಂತೆ ಕಡ್ಡಾಯವಾಗಿ ನಮೂದಿಸುವುದು.
- ಹೊಸದಾಗಿ ನೇಮಕಗೊಂಡು ಕಾಲೇಜಿನಲ್ಲಿ ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸುವುದು (Entry).
- ವರ್ಗಾವಣೆ/ಹುದ್ದೆ ಸಮೇತ ಸ್ಥಳಾಂತರ/ಪದೋನ್ನತಿ ಕಾರಣಗಳಿಂದ ಬೇರೆ ಕಾಲೇಜಿಗೆ ಸ್ಥಳ ನಿಯುಕ್ತಿ ಹೊಂದಿದ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಸದರಿ ಸಿಬ್ಬಂದಿವರ್ಗದವರು ಕರ್ತವ್ಯದಿಂದ ಬಿಡುಗಡೆ ಹೊಂದಿದ ಕೂಡಲೇ ಹಿಂದಿನ ಕಾಲೇಜಿನ ಇ.ಎಂ.ಐ.ಎಸ್ ನಿಂದ ತೆಗೆದು ಹಾಕುವುದು (Delete).
- ನಿವೃತ್ತಿ (ವಯೋ/ಸ್ವಇಚ್ಛಾ)/ರಾಜೀನಾಮೆ/ಅನ್ಯ ಇಲಾಖೆಗಳಿಗೆ ನೇಮಕಾತಿ ಹೊಂದಿದ/ ವಜಾ/ಮರಣ ಇತ್ಯಾದಿ ಕಾರಣಗಳಿಂದ ಸರ್ಕಾರಿ/ಇಲಾಖಾ ಸೇವೆಯಿಂದ ಬಿಡುಗಡೆ ಮಾಡಲಾದ/ತೆಗೆದು ಹಾಕಲ್ಪಟ್ಟ ನೌಕರರ ಮಾಹಿತಿಯನ್ನು ತಕ್ಷಣ ಇ.ಎಂ.ಐ.ಎಸ್ ನಿಂದ ಕಡ್ಡಾಯವಾಗಿ ತೆಗೆದು ಹಾಕುವುದು (Delete).
- ನಿಯೋಜನೆ ಹೊಂದಿದ ಬೋಧಕ/ಬೋಧಕೇತರರ ಮಾಹಿತಿಯನ್ನು ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಕಾಲೇಜಿನ ಇ.ಎಂ.ಐ.ಎಸ್ ನಲ್ಲಿ ಮಾತ್ರ ನಮೂದು (Entry) ಮಾಡತಕ್ಕದ್ದು.
- ಒಂದು ವಿಷಯದ ಹುದ್ದೆಗೆ ಎದುರಾಗಿ ನೇಮಕಾತಿ/ವರ್ಗಾವಣೆ ಹೊಂದಿದ ಬೋಧಕರನ್ನು ಇನ್ನೊಂದು ವಿಷಯದ ಕಾರ್ಯಭಾರಕ್ಕೆ ನಮೂದು ಮಾಡಬಾರದು.

- ಬೋಧನಾ ಕಾರ್ಯಭಾರವನ್ನು ಸರಿಯಾಗಿ ಲೆಕ್ಕಾಚಾರ ಮಾಡಿ ನಮೂದಿಸುವುದು ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾಶಾಸ್ತ್ರ ವಿಷಯಗಳ ಬೋಧನಾ ಕಾರ್ಯಭಾರವನ್ನು ಪ್ರತ್ಯೇಕವಾಗಿ ನಮೂದಿಸುವುದು.
- ಅನ್ಯ ಕಾರ್ಯ ನಿಮಿತ್ತ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ ಮಾಹಿತಿಯನ್ನು ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಕಾಲೇಜಿನ ಇ.ಎಂ.ಐ.ಎಸ್ ಮಾತ್ರ ನಮೂದು ಮಾಡುವುದು.
- ಈಗಾಗಲೇ upload ಮಾಡಲಾಗಿರುವ Staff Profile ನಲ್ಲಿ ಕೂಡಾ ಉಪನ್ಯಾಸಕರು ನೇಮಕಾತಿ ಹೊಂದಿರುವ ವಿಷಯದ ಬಗ್ಗೆ ಮತ್ತೊಮ್ಮೆ ನೇಮಕಾತಿ ಆದೇಶದೊಂದಿಗೆ ಪರಿಶೀಲಿಸಿ ಮಾಹಿತಿ ತಪ್ಪಾಗಿದ್ದಲ್ಲಿ ಸರಿಪಡಿಸಲು ಸೂಚಿಸಿದೆ.
- ಪ್ರಾಂಶುಪಾಲರು ಗ್ರೇಡ್-1/ಗ್ರೇಡ್-2 ಹುದ್ದೆಗೆ ಪದೋನ್ನತಿ ಹೊಂದಿರುವ ಪ್ರಾಧ್ಯಾಪಕರು ಮಾತ್ರ ಇ.ಎಂ.ಐ.ಎಸ್.ನಲ್ಲಿ Principal Permanent ಎಂದು ನಮೂದಿಸತಕ್ಕದ್ದು. ಉಳಿದಂತೆ ಸೇವಾ ಹಿರಿತನದ ಆಧಾರದ ಮೇಲೆ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು Principal incharge ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
- ಅನುದಾನಿತ ಖಾಸಗಿ ಕಾಲೇಜಿನಿಂದ ಮರುಹಂಚಿಕೆ ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳ ವಿವರಗಳನ್ನು ಇ.ಎಂ.ಐ.ಎಸ್.ನಲ್ಲಿ Re-deployed from Private Aided College ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
- ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯಿಂದ ನಿಯೋಜನೆ ಮೇರೆಗೆ ಇಲಾಖೆಯಲ್ಲಿ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಮಾತ್ರ ಇ.ಎಂ.ಐ.ಎಸ್‌ನಲ್ಲಿ Accounts Superintendent ಎಂದು ನಮೂದಿಸತಕ್ಕದ್ದು.

**ನಿಯೋಜನೆ ಹೊಂದಿದ ಬೋಧಕರನ್ನು ಮಾತೃ (ವೇತನ ಪಡೆಯುತ್ತಿರುವ) ಮತ್ತು ನಿಯೋಜಿತ ಕಾಲೇಜು (ಎರಡೂ ಕಾಲೇಜುಗಳ) ಇ.ಎಂ.ಐ.ಎಸ್ ನಲ್ಲಿ Regular ಎಂದು ನಮೂದಿಸಿರುವುದು ಹಾಗೂ ಮಾತೃ ಕಾಲೇಜಿನ ಇ.ಎಂ.ಐ.ಎಸ್ ನಿಂದ ತೆಗೆದು ನಿಯೋಜಿತ ಕಾಲೇಜಿನಲ್ಲಿ Regular ಎಂದು ನಮೂದು ಮಾಡಿರುವ ಪ್ರಕರಣಗಳನ್ನು ಗಮನಿಸಲಾಗಿದೆ. ಕೂಡಲೇ ನಿಯೋಜಿತ ಕಾಲೇಜಿನಲ್ಲಿ ಸದರಿ ನಮೂದುಗಳನ್ನು ತೆಗೆದು ಹಾಕಿ (Delete), ಮಾತೃ (ವೇತನ ಪಡೆಯುತ್ತಿರುವ) ಕಾಲೇಜಿನಲ್ಲಿಯೇ ನಮೂದು ಮಾಡುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ಅಂತಹ ನಿಯೋಜನೆಗಳನ್ನು ರದ್ದುಪಡಿಸಲಾಗುವುದು.**

**ಅಪ್‌ಲೋಡ್ ಮಾಡಿರುವ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಅಸಂಗತ ಮಾಹಿತಿಗಳನ್ನು ಇ.ಎಂ.ಐ.ಎಸ್.ನಲ್ಲಿ Upload ಮಾಡಿದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.**

**ಕಾಲೇಜು ಶಿಕ್ಷಣ ಆಯುಕ್ತರು**

ಇವರಿಗೆ:

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-(ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು).
4. ಕಛೇರಿ ಪ್ರತಿ.

*DCE 441 Circular*